**ದಾಸಸಾಹಿತ್ಯ ಪ್ರಚಾರಕ್ಕೆ ಹರಿದಾಸಮೇಳ**

ಬೆಂಗಳೂರು: ದಾಸಸಾಹಿತ್ಯದ ವ್ಯಾಪಕ ಪ್ರಚಾರಕ್ಕಾಗಿ ಪೀಠವನ್ನು ಸ್ಥಾಪಿಸುವುದರ ಜೊತೆಗೆ ಮೇಳವೊಂದನ್ನು ಕಟ್ಟಿ ದಾಸರ ಪದಗಳನ್ನು ಹಾಡುತ್ತಾ ನಾಡಿನ ವಿವಿಧ ಭಾಗಗಳಿಗೆ ಸಂಚರಿಸಿ ದಾಸಸಾಹಿತ್ಯದ ಶ್ರೇಷ್ಠತೆಯನ್ನು, ಅದರ ಸಾಮಾಜಿಕ ಅನ್ವರ್ಥತೆಯನ್ನು ಜನರಿಗೆ ಮುಟ್ಟಿಸುವಲ್ಲಿ ಕಾರ್ಯತತ್ಪರ ರಾಗಬೇಕೆಂದು ಸುಬ್ರಮಣ್ಯ ಮಠಾದೀಶರಾದ ಶ್ರೀಶ್ರೀವಿದ್ಯಾಭೂಷಣ ತೀರ್ಥ ಶ್ರೀ ಪಾದಂಗಳವರು ಕರೆ ನೀಡಿದರು. ಶ್ರೀಗಳವರು ೧೬ನೇ ಮಾಧ್ವ ತತ್ವಜ್ಞಾನ ಸಮ್ಮೇಳನದ ೨ನೇ ದಿನದಂದು ಏರ್ಪಡಿಸಿದ ದಾಸಸಾಹಿತ್ಯ ಗೋಷ್ಠಿಯಲ್ಲಿ ಅನುಗ್ರಹ ಭಾಷಣವನ್ನು ಮಾಡುತ್ತಿದ್ದರು. ಈ ರೀತಿಯ ತಿರುಗಾಟವು ಮೇಳದಿಂದ ಹರಿದಾಸ ಸಾಹಿತ್ಯದ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸಬಹುದೆಂದು ಅವರು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಅನುಗ್ರಹಿಸಿದ ಶ್ರೀ ವಿಶ್ವೇಶ್ವತೀರ್ಥ ಶ್ರೀ ಪಾದಂಗಳವರು ಸೂರ್ಯನ ಪ್ರಕಾಶದಂತೆ ಪ್ರಕಾರವಾಗಿರುವ ಮಾಧ್ವ ತತ್ವ ಶಾಸ್ತ್ರವನ್ನು ಚಂದ್ರನ ಬೆಳದಿಂಗಳಂತೆ ಹಿತವಾಗಿಸಿದವರು ಹರಿದಾಸರು ಎಂದು ನುಡಿದರು. ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಕವಿಗಳಾದ ಶ್ರೀ ಸುಬ್ಬಣ್ಣರಂಗನಾಥ್ ಎಕ್ಕುಂಡಿಯವರು ಮಾತನಾಡುತ್ತಾ ಕನ್ನಡ ಭಾಷೆಯಲ್ಲೂ ಭಗವಂತನೊಡನೆ ಮಾತನಾಡಬಹುದು ಎಂಬುದನ್ನು ಹರಿದಾಸರು ತೋರಿಸಿಕೊಟ್ಟಿದ್ದಾರೆ ಎಂದು ನುಡಿದರು.

ಶ್ರೀ ಮದಾನಂದ ತೀರ್ಥರಂತಹ ಗುರುಗಳು ಹಾಗೂ ವ್ಯಾಸ ಕೂಟ ದಾಸಕೂಟಗಳಂತಹ ವಿಶಿಷ್ಠ ಪರಂಪರೆಯಿರುವುದು ಮಾಧ್ವ ಸಮಾಜದ ಭಾಗ್ಯ ಎಂದು ಅವರು ವಿವರಿಸಿದರು. ಇದೇ ಗೋಷ್ಠಿಯಲ್ಲಿ ಭಾಗವಹಿಸಿದ ಪ್ರೊ.ವಸಂತ್ ಕುಷ್ಠಗಿಯವರು ಸೆನೆಟ್ ಹಾಗೂ ವಿ.ವಿ.ಗಳಲ್ಲಿ ದಾಸಪೀಠವನ್ನು ಸ್ಥಾಪಿಸಲು ಕರೆ ನೀಡಿದರು. ಈಗಾಗಲೇ ತಾವು ಕುಲ್ಬುರ್ಗಿ ವಿ.ವಿ.ಯಲ್ಲಿ ದಾಸಪೀಠವನ್ನು ಜಾರಿಗೆ ತರಲು ಮಾಡುತ್ತಿರುವುದಾಗಿ ತಿಳಿಸಿದರು. ನಂತರ ಶ್ರೀ ಎಂ.ರಾಜಗೋಪಾಲಚಾರಿಯವರು ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆಯನ್ನು ವಿವರಿಸುತ್ತಾ ಸಂಗೀತ ಮೌಲ್ಯ, ಸಾಹಿತ್ಯ ಮೌಲ್ಯ ಹಾಗೂ ತತ್ವ ಮೌಲ್ಯಗಳ ಸಂಗಮವನ್ನು ನಾವು ಕಾಣಬಹುದೆಂದು ನುಡಿದರು.

ಡಾ॥ನಾರಾಯಣ್ ಧೂಳಿಖೇಡ್ ಮಾತನಾಡಿ ಲೌಕಿಕರನ್ನು ಎಬ್ಬಿಸಿ ಮೂಢ ಸಂಪ್ರದಾಯದ ವಿರುದ್ದ ಸಮರ ಸಾರಿ ಡಂಭಾಚಾರ ಬೂಟಾಟಿಕೆಯನ್ನು ಟೀಕಿಸಿ ಸಮತಾವಾದ, ಧರ್ಮ ಸಹಿಷ್ಣುತೆ ನ್ಯಾಯವನ್ನು ಹರಿದಾಸರು ಸಮಾಜದಲ್ಲಿ ಸ್ಥಾಪಿಸದರೆಂದರು. ಡಾ॥ಗುರುರಾಜ್ ಗುಡಿಯವರು ಮಾತನಾಡಿ ಹರಿದಾಸ ಸಾಹಿತ್ಯ ಇಂದಿನವರೆಗೆ ನಿರಂತರವಾಗಿ ಹರಿದುಬಂದಿರಬೇಕಾದರೆ ಅದಕ್ಕೆ ಮುಖ್ಯ ಕಾರಣ ಮಹಿಳೆಯರು ಮತ್ತು ತಾಯಂದಿರೆಂದರು.

Feb 20th 1994 Hosa Diganta DasaSahitya Pracharakke HaridasaraMela